ಇಂದು ದಿಃ **05-04-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ.ಜಿ.ಎಸ್ ವಕೀಲರಿಂದ ವಾದಿಗಳ ಪರಃ**

ವಾದಿಯರ ಪರಿಚಯ ಇದೆ. ಸಾಕ್ಷಿ ಅವರ ಕುಟುಂಬ ಬೇರೆ ನಮ್ಮ ಕುಟುಂಬ ಬೇರೆ ಎಂದು ಹೇಳುತ್ತಾರೆ. ನನ್ನ ಅತ್ತೆಯ ಹೆಸರು ಎಲ್ಲಮ್ಮ. ನನ್ನ ಮಾವನ ಹೆಸರು ಹನುಮಂತಪ್ಪ. ನನ್ನ ಮಾವನ ತಂದೆಯ ಹೆಸರು ಮರಿಬಸಪ್ಪ. ನಂದಿಗಾವಿ ಹನುಮವ್ವ ನನ್ನ ಮಾವನ ಅಜ್ಜಿ. ಈ ನಂದಿಗಾವಿ ಹನುಮವ್ವ ಇವಳಿಗೆ, ಪಕ್ಕೀರಮ್ಮ ಮತ್ತು ಕೊಟ್ರಮ್ಮ ಎಂಬ ಮಕ್ಕಳು ಇರುತ್ತಾರೆ. ಪಕ್ಕೀರಮ್ಮ ಇವಳಿಗೆ ಹನುಮಂತಪ್ಪ, ಯಲ್ಲಕ್ಕ ಮತ್ತು ಶಾರದಮ್ಮ ಎಂಬ 3 ಜನ ಮಕ್ಕಳು ಎಂದರೆ ಸರಿ. ಪಕ್ಕೀರಮ್ಮನ ಮೊದಲನೇ ಮಗ ಹನುಮಂತಪ್ಪ ಎಂದರೆ ಸರಿ. ಹನುಮಂತಪ್ಪ ಮತ್ತು ಆತನ ಹೆಂಡತಿ ಎಲ್ಲಮ್ಮ ತೀರಿಕೊಂಡಿದ್ದಾರೆ ಎಂದರೆ ಸರಿ. ಹನುಮಂತಪ್ಪ ಮತ್ತು ಎಲ್ಲಮ್ಮನ ಮಗ ಎಂದರೆ ನನ್ನ ಗಂಡ ಹನುಮಂತಪ್ಪ ಎಂದರೆ ಸರಿ. ನನ್ನ ಗಂಡ ಸಹ ತೀರಿಕೊಂಡಿದ್ದಾನೆ ಎಂದರೆ ಸರಿ. ಚೌಡಮ್ಮ, ಚಂದ್ರಪ್ಪ, ನಾಗಪ್ಪ ಮತ್ತು ಬಸವರಾಜ ಇವರು ನನ್ನ ಗಂಡನ ಸಹೋದರಿ ಮತ್ತು ಸಹೋದರರು ಎಂದರೆ ಸರಿ.

ನಂದಿಗಾವಿ ಹನುಮವ್ವ ಇವಳ ಮಗಳು ಕೊಟ್ರಮ್ಮ ಇವಳನ್ನು ದಾವಣಗೆರೆ ತಾಲೂಕಿನ ಶಿರಂಗೊಂಡನಹಳ್ಳಿಗೆ ಮದುವೆ ಮಾಡಿಕೊಟ್ಟಿದ್ದು, ಆತನ ಗಂಡನ ಹೆಸರು ಗೊತ್ತಿಲ್ಲ. ಕೊಟ್ರಮ್ಮ ಇವಳ ಗಂಡನ ಹೆಸರು ಹನುಮಂತಪ್ಪ ಮತ್ತು ಅವರ ಮಗನ ಹೆಸರು ಶೇಖರಪ್ಪ ಅಲಿಯಾಸ್ ನಿಂಗಪ್ಪ ಎಂದರೆ ಸರಿ. 1 ನೇ ವಾದಿ ಈ ಶೇಖರಪ್ಪನ ಹೆಂಡತಿ ಮತ್ತು ಕೊಟ್ರಮ್ಮ ಇವಳ ಸೊಸೆ ಎಂದರೆ ಸರಿ. ವಾದಿ ನಂಬರ್ 2 ರಿಂದ 5 ಇವರು 1 ನೇ ವಾದಿ ಮತ್ತು ಶೇಖರಪ್ಪನ ಮಕ್ಕಳು ಎಂದರೆ ಸರಿ.

ದಾವಾ ಆಸ್ತಿಯ ಸರ್ವೆ ನಂಬರ್ 35 ಇರುತ್ತದೆ. ದಾವಾ ಆಸ್ತಿ ಮೂಲತಃ ನಂದಿಗಾವಿ ಹನುಮವ್ವ ಇವಳದು ಎಂದರೆ ಸರಿ. ಸಾಕ್ಷಿ ಮನೆತನಕ್ಕೆ ಕೊಟ್ಟಿದ್ದರು ಎಂದು ಹೇಳುತ್ತಾರೆ. ನಂದಿಗಾವಿ ಹನುಮವ್ವ ಇವಳ ಹೆಸರಿಗೆ 2014 ನೇ ಇಸವಿಯವರೆಗೆ ದಾವಾ ಆಸ್ತಿಗೆ ಖಾತೆ ಇತ್ತು ಎಂದರೆ ಸರಿ. ನಂದಿಗಾವಿ ಹನುಮವ್ವ ತೀರಿಕೊಂಡ ನಂತರ, ನಮ್ಮ ಹೆಸರಿಗೆ ಈ ದಾವಾ ಆಸ್ತಿಯನ್ನು ಖಾತೆ ಬದಲಾವಣೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿ. ಸಾಕ್ಷಿ ಪೂರ್ಣ ಜಮೀನು ಚಾನಲ್ ಗೆ ಹೋಗಿದೆ ಎಂದು ಹೇಳುತ್ತಾರೆ.

ದಾವಾ ಆಸ್ತಿಯ ಸ್ವಲ್ಪ ಭಾಗವನ್ನು ನಾವು ನೇತ್ರ, 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವು ಖಾತೆ ಬದಲಾವಣೆ ಮಾಡಿಕೊಳ್ಳುವ ಸಮಯದಲ್ಲಿ ಮನೆತನದ ಪೂರ್ಣ ವಂಶವೃಕ್ಷವನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನನ್ನ ಮಾವ ಹಾಕಿದ್ದರು ನನಗೆ ಗೊತ್ತಿಲ್ಲಎಂದು ಹೇಳುತ್ತಾರೆ. ನನ್ನ ಗಂಡನ ತಂದೆ ಸುಮಾರು 20 ರಿಂದ 25 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. 2014 ರಲ್ಲಿ ಖಾತೆ ಬದಲಾವಣೆಗೆ ಅರ್ಜಿಕೊಡಬೇಕಾದರೆ ನನ್ನ ಗಂಡ ಅಥವಾ ನನ್ನ ಮಾವ ಇಬ್ಬರೂ ಬದುಕಿರಲಿಲ್ಲ ಎಂದರೆ ಸಾಕ್ಷಿ ಚಾನಲ್ ಗೆ ಜಮೀನು ಹೋಗಿದೆ ಎಂದು ಹೇಳುತ್ತಾರೆ. ನನ್ನ ಗಂಡನ ಸಹೋದರರು ನನ್ನ ಹೆಸರಿಗೆ ಖಾತೆ ಮಾಡಿಸಿರಬಹುದು.

ನನ್ನ ಮಾವ ಬದುಕಿದ್ದಾಗ ಆತ ಮತ್ತು ಆತನ ಸಹೋದರಿಯರ ನಡುವೆ ಪಾಲುವಿಭಾಗ ಆಗಿತ್ತು. ಪಾಲುವಿಭಾಗ ಆಗಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಕೊಟ್ರಮ್ಮ ಇವಳನ್ನು ಮದುವೆ ಮಾಡಿಕೊಟ್ಟ ಕಾರಣ, ಆಕೆ ಬೇರೆ ಮನೆತನದವಳು ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ಪಕ್ಕೀರಮ್ಮ ಇವಳನ್ನು ಜರೇಕಟ್ಟೆ ಗ್ರಾಮಕ್ಕೆ ಮದುವೆಮಾಡಿಕೊಟ್ಟಿದ್ದರು ಎಂದರೆ ಸರಿ. ಕೊಟ್ರಮ್ಮ ತನ್ನ

ಗಂಡ ತೀರಿಕೊಂಡ ನಂತರ ಜರೇಕಟ್ಟೆ ಗ್ರಾಮದಲ್ಲಿ ಬಂದು ವಾಸ ಇದ್ದಾರೆ ಎಂದರೆ ಸರಿ. ನಂದಿಗಾವಿ ಹನುಮವ್ವ ಇವಳನ್ನು ನಾನು ನೋಡಿಲ್ಲ. ನನ್ನ ಮದುವೆಯಾದಗಿನಿಂದ ವಾದಿಯರು ಜರೇಕಟ್ಟೆ ಗ್ರಾಮದಲ್ಲಿ ವಾಸ ಇದ್ದಾರೆ ಎಂದರೆ ಸರಿ. ನನ್ನ ಗಂಡ ಬದುಕಿದ್ದಾಗ ಪಾಲುವಿಭಾಗ ಮಾಡಿಕೊಂಡರಾ ಎಂದರೆ ಸಾಕ್ಷಿ ಮಾಡಿಕೊಂಡಿರಬಹುದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ಕೊಟ್ರಮ್ಮ ಇವಳ ವಾರಸುದಾರರನ್ನು ಬಿಟ್ಟು ನಾವು ಮಾತ್ರ ದಾವಾ ಆಸ್ತಿಗೆ ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡೆವು ಎಂದರೆ ಇರಬಹುದು. ನಿ.ಪಿ-16 ರ ಪ್ರಕಾರ ಕೊಟ್ರಮ್ಮ ಇವಳ ವಾರಸುದಾರರನ್ನು ತೋರಿಸದೇ ನಾವು ಮಾತ್ರ ಖಾತೆ ಬದಲಾವಣೆ ಮಾಡಿಕೊಂಡಿದ್ದೇವೆ ಎಂದರೆ ಸಾಕ್ಷಿ ನಮ್ಮ ಆಸ್ತಿ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. ನಿ.ಪಿ-17 ರಲ್ಲಿಯೂ ನಂದಿಗಾವಿ ಹನುಮವ್ವ ಎಲ್ಲಾ ವಾರಸುದಾರರನ್ನು ಸೇರಿಸದೇ ನಾವು ಮಾತ್ರ ಖಾತೆ ಬದಲಾವಣೆ ಮಾಡಿಕೊಂಡಿದ್ದೇವೆ ಎಂದರೆ ಸಾಕ್ಷಿ ಸುಮ್ಮನೆಯಾಗುತ್ತಾರೆ.

ನಂದಿಗಾವಿ ಹನುಮವ್ವ ಇವಳಿಗೆ ಕೊಟ್ರಮ್ಮ ಮತ್ತು ಪಕ್ಕೀರಮ್ಮ ಎಂಬ ಇಬ್ಬರು ಮಕ್ಕಳು ಇದ್ದು, ಈ ವಿಷಯ ನಮಗೆ ಗೊತ್ತಿದ್ದರೂ ಕೊಟ್ರಮ್ಮ ಇವಳ ವಾರಸುದಾರರನ್ನು ನಾವು ತೋರಿಸದೇ ಖಾತೆ ಬದಲಾವಣೆ ಮಾಡಿಕೊಂಡಿದ್ದೇವೆ ಎಂದರೆ ಸಾಕ್ಷಿ ಗಂಡು ಮಕ್ಕಳು ಮಾಡಿಸಿರುತ್ತಾರೆ ಎಂದು ಹೇಳುತ್ತಾರೆ. ಸರ್ವೆ ನಂಬರ್ 35/6 ರಲ್ಲಿ ದಿನಾಂಕಃ31-01-2017 ರಂದು 1 ಎಕರೆ 4.04 ಗುಂಟೆ ಜಮೀನನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ. ಪುನಃ ಸರ್ವೆ ನಂಬರ್ 35/12 ರಲ್ಲಿ 23 ಗುಂಟೆ ಜಮೀನನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ. ನಮ್ಮ ಹೆಸರುಗಳಿಗೆ ಪ್ರತ್ಯೇಕವಾಗಿ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿ.

ನಿ.ಪಿ-29 ರಿಂದ 35 ರ ಪ್ರಕಾರ ನಮ್ಮ ಹೆಸರಿಗೆ ದಾವಾ ಆಸ್ತಿಗೆ ಖಾತೆ ಬದಲಾವಣೆ ಮಾಡಿಕೊಂಡಿದ್ದೇವೆ ಎಂದರೆ ಸರಿ. ನಂದಿಗಾವಿ ಹನುಮವ್ವ ಇವಳಿಗೆ ಇನೊಬ್ಬ ಮಗಳು ಇದ್ದ ವಿಷಯ ಗೊತ್ತಿದ್ದರೂ, ಅದನ್ನು ಮುಚ್ಚಿಹಾಕಿ ನಮ್ಮ ಹೆಸರಿಗೆ ಮಾತ್ರ ಖಾತೆ ಬದಲಾವಣೆ ಮಾಡಿಕೊಂಡಿದ್ದೇವೆ ಎಂದರೆ ಸಾಕ್ಷಿ ಮೊದಲೇ ಖಾತೆ ಬದಲಾವಣೆ ಆಗಿತ್ತು ಎಂದು ಹೇಳುತ್ತಾರೆ. ದಾವಾ ಆಸ್ತಿ ನಂದಿಗಾವಿ ಹನುಮವ್ವಳಿಂದ ನಮಗೆ ಬಂದಿದ್ದು ಎಂದರೆ ಸರಿ. ವಾದಿಯರಿಗೆ ಹಿಸ್ಸೆಕೊಡಬೇಕಾಗುತ್ತದೆ ಎಂದು ತಿಳಿದು, ವಾದಿಯರು ನಮ್ಮ ವಂಶದವರು ಅಲ್ಲ ಎಂದು ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮತ್ತು ವಾದಿಯರ ಮನೆ ಅಕ್ಕ ಪಕ್ಕದಲ್ಲಿ ಇದೆ. ವಾದಿಯರು ನಮಗೆ ಸಾಕಷ್ಟು ಬಾರಿ ಪಾಲುವಿಭಾಗ ಮಾಡಿಕೊಡಿ ಎಂದು ಕೇಳುತ್ತಾ ಬಂದರೂ ನಾವು ಮುಂದೂಡತ್ತಾ ಬಂದೇವು ಎಂದರೆ ಸರಿಯಲ್ಲ. ನಾವು ಪಾಲುವಿಭಾಗ ಮಾಡಿಕೊಡುವುದಿಲ್ಲ ಎಂದು ಹೇಳಿದಾಗ ವಾದಿಯರು ಈ ದಾವೆ ಮಾಡಿದ್ದಾರೆ ಎಂದರೆ ಸರಿಯಲ್ಲ.

ನಾವು ನೇತ್ರಾ ಇವಳಿಗೆ ಮಾರಾಟ ಮಾಡಿದ್ದರೂ ಮಾರಾಟ ಮಾಡಿಲ್ಲ ಎಂದು ಸುಳ್ಳು ತಕರಾರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ವಾದಿಯರು ನಂದಿಗಾವಿ ಹನುಮವ್ವಳ ವಂಶಸ್ಥರು ಇರುವ ಕಾರಣ, ಅವರ ಹಿಸ್ಸೆ ಅವರಿಗೆ ಕೊಟ್ಟರೆ ಏನೂ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ. ನಮಗೂ ಮತ್ತು ವಾದಿಯರಿಗೂ ಸಂಬಂಧ ಇಲ್ಲ ಎಂದು ಮತ್ತು ದಾವೆ ಕಾಲಪರಿಮಿತಿ ಮೀರಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2014 ರಲ್ಲಿ ವಾದಿಯರಿಗೆ ಖಾತೆ ಬದಲಾವಣೆ ಆಗಿದೆ ಎಂದು ಗೊತ್ತಾದ ನಂತರ ಕೂಡಲೇ ಈ ದಾವೆ ಮಾಡಿದ್ದಾರೆ ಎಂದರೆ ಸರಿಯಲ್ಲ. 2014 ರವರೆಗೆ ಈ ಜಮೀನು ನಂದಿಗಾವಿ ಹನುಮವ್ವಳ

ಹೆಸರಿಗೆ ಇತ್ತು ಎಂದರೆ ಸರಿ. 6 ನೇ ಪ್ರತಿವಾದಿಯ ಗಂಡ ಇವನ ಮಾತುಕೇಳಿ ಅವನ ಮಾತಿನ ಪ್ರಕಾರ ಸುಳ್ಳು ತಕರಾರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.